> ತನ್ನ ತಲೆಯಲ್ಲಿ ಪುಟಿಯುತ್ತಿದ್ದ ನಿರಂತರ ಮಾತುಗಳಿಂದ ಗರುಡ ಬೇಸತ್ತು ಹೋದ. ನಾಳೆಯವರೆಗೆ ಈ ದಿನವನ್ನ ದೂಡುವುದೇ ದುಸ್ತರವಾದಂತೆನ್ನಿಸಿ ದುಃಖಿಸಿದ. ನನ್ನ ಪೀಳಿಗೆಯೇ ಒಂದು ಶಾಪಗ್ರಸ್ತ ಪೀಳಿಗೆ ಇರಬೇಕು ಅನ್ನಿಸಿ ಅಳು ಬಂದು ಗರುಡ ಬಿಕ್ಕಿ ಬಿಕ್ಕಿ ಅತ್ತ.

ಪೋಣಿಸಿಕೊಂಡು ನನ್ನನ್ನು ಮಹಾನ್ ಪ್ರೇಮಿಯಂತೆ ತೋರಿಸಲು ಸಿದ್ಧತೆ ನಡೆಸಿವೆ ಎಂದು ಗರುಡ ವಿಸ್ಮಯಗೊಂಡ.

'ಇಲ್ಲ, ನಮಗ್ಯಾರಿಗೂ ಪ್ರೀತಿ, ಯೌವನ ದಕ್ಕಲೇ ಇಲ್ಲ.' ಎನ್ನಿಸಿತು ಗರುಡನಿಗೆ. ಆಗ ತಾನೇ ಐವರ ಮುಖದಲ್ಲಿ ಸಣ್ಣಗೆ ಮೀಸೆ ಕುಡಿಯೊಡೆಯುತ್ತಿದ್ದ ಕಾಲ! ಕೆನ್ನೆಯ ಮೇಲೆ ಮೊಡವೆ ಎದ್ದಂತೆ, ಎದುರಿಗೆ ಓಡಾಡುವ ಹುಡುಗಿಯರ ಅಲ್ಲಾಡುವ ಸಂಗತಿಗಳಿಗೆ ರಕ್ತದೊತ್ತಡ ಏರಿಳಿಯುತ್ತಾ, ಭಾವನೆಗಳು ಗೂಡು ಕಟ್ಟುತ್ತಿದ್ದಾಗ ಅಲ್ಲವೇ ತಾವೆಲ್ಲರೂ ಕವನ ಬರೆಯಲು ಪ್ರಾರಂಭಿಸಿದ್ದು. ಕನ್ನಡ ಮೇಜರ್‌ನ ನಾಣಿ ನವ್ಯದ ರೋಮ್ಯಾಂಟಿಸಿಟಿಯ ಮೊರೆ ಹೊಕ್ಕರೆ, ರಫಿ ತನ್ನ ಹರಕು ಮುರುಕು ಉರ್ದುವಿನಲ್ಲೇ ಶಾಯರಿ ಬರೆಯತೊಡಗಿದ. ಕಾಮರ್ಸ್‌ನ ತನಗೆ 'ನೀನು ಸುಂದರ, ಮೊಗವು ಚಂದಿರ' ಎಂಬಂತಹ ಪದ್ಯ ದಕ್ಕಿದ್ದು. ಜಾಗೀರ್ದಾರ, ಐತಾಳ ಮೊಹಮ್ಮದ್ ರಫಿಯ ಮೊಹಬ್ಬತ್ ಗೀತೆಗಳಿಗೇ ಕನ್ನಡ ಭಾವಾನುವಾದ ಮಾಡಿ ಕವಿತ್ವ ಪಡೆದುಕೊಂಡಿದ್ದರು. ಆಗ ಎಲ್ಲ ಮೊಣಕಾಲುದ್ದದ ಜುಬ್ಬ ಹೊಲೆಸಿ ಬ್ಲೇಡ್ ಹಾಕಿ ಕೆರೆದೂ ಕೆರೆದೂ ಮೂಡಿಸಿದ ಗಡ್ಡದ ಕುರುಚಲನ್ನೇ ಮೊಗದಲ್ಲಿ ತುಂಬಿಕೊಂಡು ಕಾದಿದ್ದು.

'ಯಾರಿಗೂ ಒಂದು ಪ್ರೀತಿ, ಒಂದು ಹುಡುಗಿಯ ಸ್ನೇಹ ಸಿಕ್ಕಲಿಲ್ಲ!' ಎನ್ನಿಸಿ ಗರುಡನಿಗೆ ನಗುಬಂತು. ಈಗ ತನಗೆ ಇಪ್ಪತ್ತೆಂಟು, ಅಮರಾವತಿ ಖಾಸಗಿ ಕಾಲೇಜ್‌ನಲ್ಲಿ ಪಾರ್ಟ್‌ಟೈಂ ಲೆಕ್ಚರರ್ ನಾಣಿಗೆ, ಬೆಂಗಳೂರಿನ ಲೋಕಲ್ ಪತ್ರಿಕೆಯ ವರದಿಗಾರ ಐತಾಳ, ಸಣ್ಣ ಕಾರ್ಖಾನೆಯೊಂದರ ಮೆಕ್ಯಾನಿಕ್ ಜಾಗೀರ್ದಾರ್, ಅಷ್ಟೇಕೆ ಸದ್ಯಕ್ಕೆ ಏನೂ ಕೆಲಸವಿಲ್ಲದ ನಿರುದ್ಯೋಗಿ ರಫಿಗೂ ಈಗ ಸದ್ದಿಲ್ಲದೇ ಮೂವತ್ತು?! ವರ್ಷ, ವಯಸ್ಸನ್ನು ಎಣಿಸುತ್ತಾ ಗರುಡ ನನ್ನದು ಪಕ್ಕಾ ಕಾಮರ್ಸ್ ಬುದ್ಧಿ ಎಂದುಕೊಂಡ.

'ಮೂವತ್ತು ವರ್ಷ!! ಏನೆಲ್ಲ ಮಾಡಬಹುದಿತ್ತು. ಸಾಧಿಸಬಹುದಿತ್ತು. ಆದರೂ ನಾವೆಲ್ಲ ಯಾಕೆ ಏನೂ ಆಗದೇ ಉಳಿದಿದ್ದೇವೆ?' ಗರುಡ ತನ್ನಲ್ಲೇ ಪ್ರಶ್ನಿಸಿಕೊಂಡ. ತಮ್ಮಲ್ಲಿ ಇದ್ದುದರಲ್ಲೇ ಕ್ರಿಯಾಶೀಲ ಎಂದರೆ ರಫಿಯೇ ಅನ್ನಿಸಿತು. ರಫಿ ಪಿ.ಯು.ಸಿ. ನಂತರ ಓದನ್ನೇ ಬಿಟ್ಟವನೇ ಆಗತಾನೇ ಬಿಸಿಲಳ್ಳಿ ತಲುಪಿದ್ದ ದಲಿತ ಬಂಡಾಯ ಚಳವಳಿಗೆ ಧುಮುಕಿದ್ದ. 'ಇಕ್ರಲಾ... ಒದೀರ್ಲಾ' ಹಾಡು ಹೇಳಿ ಸಂಘಟನೆ ಮಾಡುತ್ತಾ ಸಂಜೆ ನಮ್ಮೆಲ್ಲರೊಡನೆ 'ನೀವೆಲ್ಲ ಮೇಲ್ಜಾತಿಯ ಜನ...' ಎಂದು ಕೂಗಾಡುತ್ತಿದ್ದ. ತಟ್ಟನೇ ಬಂಡಾಯದಿಂದ ಹೊರಬಂದವ ಪರಿಸರ ಉಳಿಸಿ ಆಂದೋಲನವೊಂದರಲ್ಲಿ ತೊಡಗಿ ಕಂಡ ಕಂಡಲ್ಲಿ ಗಿಡ ನೆಡತೊಡಗಿದ್ದ. ಈ ನಡುವೆ ತಾನು ಸುಲೇಮಾನ್ ಬ್ಯಾರಿಯ ಮಗಳು ಚಾಂದನಿಯನ್ನು ಪ್ರೀತಿಸ್ತಿದ್ದು, ಆಕೆಯ ನುಣುಪು ಬಿಳೀ ಕೈಗಳಿಗೆ ಮುತ್ತಿಕ್ಕಿದಾಗ ಆಕೆ ಅಮಲೇರಿದಂತೆ ಉನ್ಮತ್ತಳಾದದ್ದು ಹೇಳಿ ನಮ್ಮೆಲ್ಲರೊಳಗೆ ಕಸಿವಿಸಿ ಹುಟ್ಟಿಸಿದ್ದ. ಚಾಂದನಿಯ ಮದುವೆ ನಡೆದು